**ಸಾಕ್ಷಿಯನ್ನು ದಿಃ 18.07.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ದಾವ ಐಟಂ ನಂ. 1 ರಿಂದ 3 ಆಸ್ತಿಗಳು ಮೂಲತಃ ನನ್ನ ತಂದೆಯವರಿಗೆ ಸೇರಿದ್ದು. ನನ್ನ ತಂದೆಯ ಹೆಸರು ಸಿದ್ದೇಗೌಡ. ನನ್ನ ತಾತನ ಹೆಸರು ಪಟೇಲ್ ಸಿದ್ದೇಗೌಡ ಅಲಿಯಾಸ್ ಸಿದ್ದೇಗೌಡ. ನಾನು ನನ್ನ ತಾತನನ್ನು ನೋಡಿರುವುದಿಲ್ಲ. ನನ್ನ ತಾತ ಇವರಿಗೆ ಪುಟ್ಟಮಾದಮ್ಮ ಎಂಬ ಹೆಂಡತಿ ಇದ್ದರು ಎಂದರೆ ಸುಳ್ಳು. ನನ್ನ ಅಜ್ಜಿಯ ಹೆಸರು ರಾಮಮ್ಮ. ರಾಮಮ್ಮ ರವರಿಗೆ ಅಕ್ಕ ತಂಗಿಯರು ಇರಲಿಲ್ಲ. ದಾವ ಸ್ವತ್ತುಗಳು ನನ್ನ ತಂದೆಯವರಿಗೆ ಸೇರಿದ್ದು. ಸದರಿ ಸ್ವತ್ತುಗಳು ನನ್ನ ತಂದೆಯವರದ್ದು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ದಾವ ಸ್ವತ್ತುಗಳು ನನ್ನ ತಂದೆಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ನಿಡಿ.1-ಆರ್.ಟಿ.ಸಿ. ಯಲ್ಲಿ ಶಿವಣ್ಣ, ಸಿದ್ದೇಗೌಡ, ಸಿದ್ದಪ್ಪಾಜಿ, ಗುರುಸ್ವಾಮಿ ಇವರುಗಳ ಹೆಸರಿಗೆ ಆಸ್ತಿ ಹೇಗೆ ಬಂತು ಎಂದರೆ ಸಾಕ್ಷಿಯು ನನ್ನ ತಂದೆಯವರೇ ಭಾಗ ಮಾಡಿಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ವಿಭಾಗ ಪತ್ರವನ್ನು ಹಾಜರು ಪಡಿಸಿರುತ್ತೇನೆ. ನನ್ನ ತಂದೆಗೆ ಶಿವಮ್ಮ, ಸಿದ್ಧರಾಜು, ಹೇಮವತಿ ಮತ್ತು ಕಮಲಮ್ಮ ಇವರು ನಾಲ್ಕು ಜನ ಮಕ್ಕಳು. ನನ್ನ ತಂದೆಯವರಿಗೆ ನಾಲ್ಕು ಜನ ಅಣ್ಣತಮ್ಮಂದಿರು ಅಂದರೆ ಸಿದ್ದೇಗೌಡ, ಶಿವಣ್ಣ, ಸಿದ್ದಾಪ್ಪಾಜಿ, ಹಾಗೂ ಗುರುಸ್ವಾಮಿ. ಸಿದ್ದಪ್ಪಾಜಿ ಇವರು ಪಟೇಲ್ ಸಿದ್ದೇಗೌಡ ಹಾಗೂ ಪುಟ್ಟಮಾದಮ್ಮ ರವರ ಮಗ ಎಂದರೆ ಸರಿಯಲ್ಲ. ಪಟೇಲ್ ಸಿದ್ದೇಗೌಡರವರಿಗೆ ಪುಟ್ಟ ಮಾದಮ್ಮ ರವರು ಹೆಂಡತಿ ಎಂದರೆ ಸರಿಯಲ್ಲ. ಪಟೇಲ್ ಸಿದ್ದೇಗೌಡ ಹಾಗೂ ಪುಟ್ಟಮಾದಮ್ಮ ಇವರಿಗೆ ನಾಲ್ಕು ಜನ ಮಕ್ಕಳು ಎಂದರೆ ಗೊತ್ತಿಲ್ಲ. ದೊಡ್ಡಹೆಣ್ಣು, ಚಿಕ್ಕಹೆಣ್ಣು, ಮರಿಯಮ್ಮ ಹಾಗೂ ಸಿದ್ದಪ್ಪಾಜಿ ಇವರು ನಾಲ್ಕು ಜನ ಮಕ್ಕಳು ಎಂದರೆ ಗೊತ್ತಿಲ್ಲ. ವಾದಿ ಮರಿಯಮ್ಮ ಯಾರು ಎಂದು ನನಗೆ ಗೊತ್ತಿಲ್ಲ. ಮರಿಯಮ್ಮ ಜೀವಂತವಾಗಿದ್ದಾರಾ ಎಂದರೆ ಗೊತ್ತಿಲ್ಲ. ಮರಿಯಮ್ಮ ತೀರಿಹೋಗಿದ್ದು ಅವರ ಮಗ ಸೋಮಣ್ಣ ದಾವೆ ಮುಂದುವರೆಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಸೋಮಣ್ಣನ ಮಗಳಿಗೆ ನನ್ನ ಅಣ್ಣನ ಮಗನಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು.

ನನ್ನ ತಂದೆ ದಿಃ 05.01.2011 ರಲ್ಲಿ ತೀರಿಹೋಗಿರುತ್ತಾರೆ. ಮರಿಯಮ್ಮ ಪಟೇಲ್ ಸಿದ್ದೇಗೌಡರವರ ಮಗಳು ಎಂದರೆ ಆ ಬಗ್ಗೆ ಗೊತ್ತಿಲ್ಲ. ಪುಟ್ಟಮಾದಮ್ಮ ಬದುಕಿರುವಾಗಲೇ ಪಟೇಲ್ ಸಿದ್ದೇಗೌಡರವರು ರಾಮಮ್ಮನನ್ನು ಮದುವೆಯಾಗಿದ್ದರು ಎಂದರೆ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಆಸ್ತಿಯೂ ನನಗೆ ವಿಭಾಗದ ಮೂಲಕ ಬಂದಿದೆ ಎಂದು ನಮೂದಾಗಿದೆಯಾ ಎಂದರೆ ಸಾಕ್ಷಿಯು ನನ್ನ ತಂದೆ ಕಾಲವಾದ ನಂತರ ನಾವು ಅಕ್ಕತಂಗಿಯರು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಪಟೇಲ್ ಸಿದ್ದೇಗೌಡರವರ ಪಿತ್ರಾರ್ಜಿತ ಆಸ್ತಿಯಲ್ಲಿ ವಾದಿಯವರಿಗೂ ಹಕ್ಕಿದೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ದಾವ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ಉತ್ತರಿಸಿರುತ್ತಾರೆ. ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ನನ್ನ ಅಜ್ಜಿ, ನನ್ನ ತಾತನವರ 2 ನೇ ಹೆಂಡತಿಯಾದ ಕಾರಣ ನಮಗೆ ಆಸ್ತಿಗಳಲ್ಲಿ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ನನ್ನ ಅಜ್ಜಿ ಒಬ್ಬಳೇ ಹೆಂಡತಿ ಎಂದು ಉತ್ತರಿಸಿರುತ್ತಾರೆ.

**ಪಾಟೀ ಸವಾಲುಃ 11 ನೇ ಪ್ರತಿವಾದಿ ಪರ ವಕೀಲರಿಂದಃ**

ವಾದಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಪಟೇಲ್ ಸಿದ್ದೇಗೌಡರು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಟೇಲ್ ಸಿದ್ದೇಗೌಡರಿಗೆ ಪುಟ್ಟಮಾದಮ್ಮ ಮೊದಲನೇ ಹೆಂಡತಿ, ರಾಮಮ್ಮ ಎರಡನೇ ಹೆಂಡತಿ ಎಂಬ ಬಗ್ಗೆ ನನಗೆ ತಿಳುವಳಿಕೆ ಇದೆಯಾ ಎಂದರೆ ಸಾಕ್ಷಿಯು ರಾಮಮ್ಮ ಮೊದಲನೇ ಹೆಂಡತಿ ಎಂದು ಗೊತ್ತಿದ್ದು ಪುಟ್ಟಮಾದಮ್ಮ ಯಾರು ಎಂದು ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ವಿಷಯ ನನಗೆ ಗೊತ್ತಿಲ್ಲದೇ ಇರುವ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ಗೋವಿಂದೇಗೌಡ ಇವರು ನನ್ನ ತಂಗಿಯ ಗಂಡ. ಗೋವಿಂದೇಗೌಡ ಇವರ ತಾಯಿಯ ಹೆಸರು ದೊಡ್ಡಹೆಣ್ಣಮ್ಮ ಅಲಿಯಾಸ್ ಸಿದ್ದಮ್ಮ ಎಂದರೆ ಸುಳ್ಳು. ಸದರಿ ವಿಷಯ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೋವಿಂದೇಗೌಡ ಇವರ ತಂದೆಯ ಹೆಸರು ಗೊತ್ತಿಲ್ಲ. ದೊಡ್ಡಹೆಣ್ಣು ಇವರಿಗೆ ಚಿಕ್ಕಹೆಣ್ಣು, ಮರಿಯಮ್ಮ, ಸಿದ್ದಪ್ಪಾಜಿ ಎಂಬ ಸಹೋದರ,

ಸಹೋದರಿಯ ಬಗ್ಗೆ ತಿಳುವಳಿಕೆ ಇದೆಯಾ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿಯವರಿಗೆ ಆಸ್ತಿಗಳಲ್ಲಿ ವಿಭಾಗ ಕೊಡಬಾರದು ಎನ್ನುವ ದುರುದ್ದೇಶದಿಂದ ಸದರಿಯವರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ಗೋವಿಂದೇಗೌಡ ಇವರು ಪಟೇಲ್ ಸಿದ್ದೇಗೌಡ ಹಾಗೂ ಪುಟ್ಟಮಾದಮ್ಮ ಇವರ ಮೊಮ್ಮಗನಾದ ಕಾರಣ ದಾವ ಆಸ್ತಿಗಳಲ್ಲಿ ಸದರಿಯವರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.